7. ನಂತರ ಇಲಾಖಾಧಿಕಾರಿಗಳಿಂದ ಪರಿಶೀಲಿಸಿ ನಿಯಮಾನುಸಾರ ಸಹಾಯಧನ ವಿತರಿಸಲಾಗುತ್ತದೆ.

ಆ) ಫಲಾನುಭವಿಗಳು ಹನಿ ನೀರಾವರಿಯನ್ನು ಅಳವಡಿಸಿ, ಎಲ್ಲಾ ಅಗತ್ಯ ದಾಖಲಾತಿಗಳನ್ನು ಸಲ್ಲಿಸಿದ ನಂತರ ಅರ್ಹತೆ ಮತ್ತು ಅನುದಾನ ಲಭ್ಯತೆ ಮೇರೆಗೆ ಆಯಾ ವರ್ಷದ ಅರ್ಜಿಗಳನ್ನು ಆಯಾ ವರ್ಷದಲ್ಲಿ ಇತ್ಯರ್ಥಗೊಳಿಸಲಾಗುತ್ತಿದೆ. ಒಂದು ವೇಳೆ ಫಲಾನುಭವಿಗಳು ಸಕಾಲದಲ್ಲಿ ಕೆಲಸ ಪೂರ್ಣಗೊಳಿಸದಿದ್ದಲ್ಲಿ/ಎಲ್ಲಾ ದಾಖಲಾತಿಗಳನ್ನು ಸಲ್ಲಿಸದಿದ್ದಲ್ಲಿ ಅಥವಾ ಅನುದಾನ ಕೊರತೆ ಇದ್ದಲ್ಲಿ ಮಾತ್ರ ಅರ್ಜಿಗಳು ಬಾಕಿ ಉಳಿಯುತ್ತವೆ, ಆಳಂದ ತಾಲ್ಲೂಕಿಗೆ ಲಭ್ಯವಾದ ಅನುದಾನದಲ್ಲಿ ಅರ್ಹ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಬಾಕಿ ಇರುವ ಅರ್ಜಿಗಳಿಗೆ ನಿಯಮಾನುಸಾರ ಪ್ರಸಕ್ತ ಸಾಲಿನಲ್ಲಿ ಸಹಾಯಧನ ನೀಡಲು ಕ್ರಮ ವಹಿಸಲಾಗುತ್ತಿದೆ.

ಇ) ಅನ್ವಯಿಸುವುದಿಲ್ಲ.

ಆಸ್ತಿ ನೋಂದಣಿ ಅವ್ಯವಹಾರ

5411 (5424); ಶ್ರೀ ಬಿ. ಆರ್. ಪಾಟೀಲ್

ಅ) ಕಳೆದ 5 ವರ್ಷಗಳಿಂದ ಆಳಂದ ಪುರಸಭೆ ವ್ಯಾಪ್ತಿಯಲ್ಲಿ ಎಷ್ಟು ಅಸ್ತಿಗಳನ್ನು ನೋಂದಣಿ ಮಾಡಿಕೊಳ್ಳಲಾಗಿದೆ.

ಆ) ಹಾಗಿದ್ದಲ್ಲಿ, ಈ ಆಸ್ತಿ ನೋಂದಣಿಯಲ್ಲಿ ಅಕ್ರಮವಾಗಿ ಆಸ್ತಿ ನೋಂದಣಿ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಅಕ್ರಮ ಆಸ್ತಿ ನೋಂದಣಿ ಮಾಡಿಕೊಳ್ಳುತ್ತಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಕಳೆದ 5 ವರ್ಷಗಳಲ್ಲಿ ಆಳಂದ ಪುರಸಭೆ ವ್ಯಾಪ್ತಿಯ ಆಸ್ತಿಗೆ ಸಂಬಂಧಿಸಿದಂತೆ 2625 ದಸ್ತಾವೇಜುಗಳು ನೋಂದಣಿ ಆಗಿರುತ್ತದೆ.

ಆ) ಗಮನಕ್ಕೆ ಬಂದಿರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಎಸ್‌ಹೆಚ್‌ಡಿಪಿ ಯೋಜನೆ ಅಡಿ ಲೋಕೋಪಯೋಗಿ ರಸ್ತೆ

5412 (5425); ಶ್ರೀ ಪಾಟೀಲ್ ಬಿ. ಆರ್. (ಆಳಂದ)

ಅ) ಆಳಂದ ನಗರದ ಸಿದ್ಧಾರ್ಥ ಚೌಕದಿಂದ ಪ್ರವಾಸಿ ಮಂದಿರದವರೆಗಿನ ಲೋಕೋಪಯೋಗಿ ರಸ್ತೆ ಎಸ್‌ಹೆಚ್‌ಡಿಪಿ ಯೋಜನೆ ಅಡಿಯಲ್ಲಿ ಕಾಮಗಾರಿ ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸದರಿ ರಸ್ತೆ ಕಾಮಗಾರಿಯನ್ನು ನಗರೋತ್ಥಾನ ಯೋಜನೆ ಅಡಿಯಲ್ಲಿ ತೆಗೆದುಕೊಂಡಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಯಾವ ಹಂತದಲ್ಲಿದೆ?

ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ನಗರೋತ್ಥಾನ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾದ ರಸ್ತೆಯ ಭಾಗವನ್ನು ಹೊರತುಪಡಿಸಿ ಉಳಿದ ಭಾಗವನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆಯು ಎಸ್‌ಹೆಚ್‌ಡಿಪಿ ಹಂತ–3 ರಲ್ಲಿ ಪರಿಶೀಲನೆಯಲ್ಲಿದೆ.

ಆ) ನಿಜ. ಆಳಂದ ಪಟ್ಟಣದ ಸಿದ್ಧಾರ್ಥ ಚೌಕದಿಂದ ಪ್ರವಾಸಿ ಮಂದಿರದವರೆಗಿನ ರಸ್ತೆಯ ಪೈಕಿ ಈ ಕೆಳಕಂಡ ಭಾಗಗಳ ರಸ್ತೆಯ ಕಾಮಗಾರಿಯನ್ನು ನಗರೋತ್ಥಾನ ಯೋಜನೆ ಅಡಿಯಲ್ಲಿ ತೆಗೆದುಕೊಂಡಿದ್ದು ಕಾಮಗಾರಿ ವಿವರ ಈ ಕೆಳಗಿನಂತಿದೆ;